ಓ.ಎಸ್. ನಂಃ 233/2020
ಡಿ.ಡಬ್ಲ್ಯೂ-1 (ಬಸಪ್ಪ)

ದಿನಾಂಕ: 09-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎಮ್.ಜಿ.ಕೆ. ವಾದಿ ಪರ ವಕೀಲರಿಂದಃ</u>**

ನಿಪಿ-34 ರಲ್ಲಿ ಬಾಳವ್ವ ಇವರ ಮರಣ ಪ್ರಮಾಣ ಪತ್ರದಲ್ಲಿ ಅವಳ ಹೆಸರು ಬಾಳವ್ವ ತಂದೆ ಅಪ್ಪೋಜಪ್ಪ ಕುರಬೇಟ ಎಂದು ನಮೂದು ಇದೆ ಎಂದರೆ ಸರಿ. ಬಾಳವ್ವ ಇವರ ತಾಯಿಯ ಹೆಸರು ಸಿದ್ದವ್ವ ಎಂದರೆ ಸರಿ. ಅಪ್ಪೋಜಪ್ಪ ಇವರು ಬಾಳವ್ವ ತೀರಿಕೊಳ್ಳುವುದಕ್ಕಿಂತ ಮೊದಲೇ ತೀರಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಪ್ಪೋಜಪ್ಪ ಮತ್ತು ಸಿದ್ದವ್ವ ಇವರಿಗೆ ಯಮನವ್ವ ಮತ್ತು ಬಾಳವ್ವ ಎಂದು ಇಬ್ಬರು ಮಕ್ಕಳಿದ್ದರು ಎಂದರೆ ಸರಿ.

2. ಬಾಳವ್ವ ಇವರು ಕಾಲ್ರಾ ರೋಗದಿಂದ 04 ವರ್ಷದವರಿದ್ದಾಗ 1948 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಬಾಳವ್ವ ಇವರ ಮದುವೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಬಾಳವ್ವ ಇವರ ಮದುವೆ ಸಿದ್ರಾಮಪ್ಪ ಹೆಗಡೆ ಇವರ ಜೊತೆ ಆಗಿತ್ತು. ಸದರಿಯವರಿಗೆ 03 ಜನ ಮಕ್ಕಳಿದ್ದರು. ಬಾಳವ್ವ ಇವರ ಮದುವೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಬಾಳವ್ವ ಇವರ ಮದುವೆ ಆಗದೇ ಅವರ 04 ವರ್ಷವರಿದ್ದಾಗ ಅವಳ ತಂದೆ ಮನೆಯಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಬಾಳವ್ವ ಮತ್ತು ಸಿದ್ರಾಮಪ್ಪ ಹೆಗಡೆ ಇವರ ಮದುವೆಯಾದ ಬಗ್ಗೆ ಮದುವೆ ಯಾದಿ ಆಗಲಿ, ಲಗ್ನ ಪತ್ರಿಕೆಯಾಗಲಿ ಹಾಜರ ಮಾಡಿಲ್ಲ.

3. ಅಪ್ಪೋಜಪ್ಪ ಇವರ ಹೆಂಡತಿ ಸಿದ್ದವ್ವ ದಿಃ 18/09/1961 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಸಿದ್ದವ್ವ ಇವರು ತೀರಿಕೊಂಡ ನಂತರ ದಾವಾ ಆಸ್ತಿಗಳಿಗೆ ಯಮನವ್ವ ಕರೆನ್ನವರ ಇವರ ಹೆಸರು ದಾಖಲಾಗಿದೆ ಎಂದರೆ ಅವರ ಸಹೋದರಿಯರ ಮಕ್ಕಳನ್ನು ಬಿಟ್ಟು ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಯಮನವ್ವ ಕರೆನ್ನವರ ಇವರು ಅವರ ಸಹೋದರಿಯರ ಮಕ್ಕಳನ್ನು ಬಿಟ್ಟು ದಾವಾ ಆಸ್ತಿಗಳಿಗೆ ತಮ್ಮ ಹೆಸರು ಹಚ್ಚಿಕೊಂಡಿದ್ದನ್ನು ಪ್ರಶ್ನಿಸಿ ನಾವು ಯಾವುದೇ ದಾವೆ ಮಾಡಿಲ್ಲ.

4. 1961 ರಿಂದ ಯಮನವ್ವ ತೀರಿಕೊಳ್ಳುವವರೆಗು ದಾವಾ ಆಸ್ತಿಗಳ ಉತಾರದಲ್ಲಿ ಅವರ ಹೆಸರು ಇತ್ತು ಎಂದರೆ ಸರಿ. ಡೈರಿ ನಂ.3407 ರ ಪ್ರಕಾರ ಯಮನವ್ವ ಇವರ ಸಹೋದರಿಯ ಮಗಳು ಎಂದು ಹೇಳಿ 1ನೇ ಪ್ರತಿವಾದಿ ಮಾಯವ್ವ ಅರ್ಧ ಹಿಸ್ಸೆಗೆ ತಮ್ಮ ಹೆಸರು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಡೈರಿ ನಂ.3407ರಲ್ಲಿ ಬಾಳವ್ವ ಎಂದು ಇದ್ದು, ಎಲ್ಲಿಯೂ ಸಹ ಬಾಳವ್ವ ಹೆಗಡೆ ಎಂದು ನಮೂದು ಇಲ್ಲ ಎಂದರೆ ಸರಿ. ಸದರಿ ಡೈರಿ ಮಾಡಿಕೊಳ್ಳುವಾಗ ನನ್ನ ತಾಯಿಗೆ ಬಾಳವ್ವ ಸಿದ್ರಾಮಪ್ಪ ಹೆಗಡೆ ಎಂದು ಬರೆಯಿಸಲು ಏನು ಸಮಸ್ಯೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಉತಾರಗಳಲ್ಲಿ ಬಾಳವ್ವ ಇವರ ಹೆಸರು  ಬಾಳವ್ವ ಗಂಡ ಸಿದ್ರಾಮಪ್ಪ ಹೆಗಡೆ ಎಂದು ಎಲ್ಲಿಯೂ ದಾಖಲ ಇಲ್ಲ ಎಂದರೆ ಸರಿ.

5. ದಾವಾ ಆಸ್ತಿಗಳು ಕುರಬೇಟ ಮನೆತನದ ಆಸ್ತಿ ಎಂದರೆ ಸರಿ. ಅಪ್ಪೋಜಪ್ಪ ಹಾಗೂ ಸಿದ್ದವ್ವ ಇವರಿಗೆ ಯಮನವ್ವ ಎಂದು ಒಬ್ಬರೇ ಮಗಳಿದ್ದಾರೆ ಎಂದರೆ ಸರಿಯಲ್ಲ. ಡೈರಿ ನಂ.3429ರ ಪ್ರಕಾರ ಯಮನವ್ವ ಇವರಿಗೆ ಇನ್ನೊಬ್ಬ ಸಹೋದರಿಯ ಮಗಳು ಮಾಯವ್ವ ಇದ್ದಾಳೆ ಎಂದು ಹೇಳಿ ಸುಳ್ಳು ಡೈರಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಯಮನವ್ವಗೆ ಗೊತ್ತಿಲ್ಲದ ಹಾಗೆ 1994ರಲ್ಲಿ ಡೈರಿ ನಂ.3599 ಎಂದು ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಯಮನವ್ವ ಇವರಿಗೆ ಆಸ್ತಿ ಸಿಗಬಾರದೆಂದು ಹೇಳಿ ಸುಳ್ಳು ಡೈರಿಗಳನ್ನು ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಬಾಳವ್ವ ಹೆಗಡೆ ಮತ್ತು ಅಪ್ಪೋಜ್ಜಪ್ಪ ಇವರ ಮಗಳು ಬಾಳವ್ವ ಬೇರೆ ಬೇರೆ ಎಂದರೆ ಸರಿಯಲ್ಲ. ನನ್ನ ತಾಯಿ ಬಾಳವ್ವ ಹೆಗಡೆ ಇವರ ಮಗಳು ಎಂದರೆ ಸರಿ. ಅಪ್ಪೋಜ್ಜಪ್ಪ ಇವರ ಕುಟುಂಬಕ್ಕು ನಮಗು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

7. ದಾವಾ ಆಸ್ತಿಗಳ ವಿಚಾರವಾಗಿ ಕೆ.ಇ.ಬಿ.ಯಿಂದ ನನ್ನ ತಾಯಿ ಅನುಮತಿ ಪಡೆದಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೆ.ಇ.ಬಿ. ಯವರು ಅನುಮತಿ ಕೊಡಬೇಕಾದಲ್ಲಿ ಸ್ಥಳಕ್ಕೆ ಬಂದು ಹೊಲ ಯಾರ ಹೆಸರಿನಲ್ಲಿ ಇದೆ, ಯಾವ ಕಬ್ಜೆಯಲ್ಲಿ ಇದ್ದಾರೆ ಎಂದು ಪರಿಶೀಲನೆ ಮಾಡಿ ಕೊಡುತ್ತಾರೆ ಎಂದರೆ ಸರಿ. ಕೆ.ಇ.ಬಿ. ಯವರು ಜಿ.ಪಿ.ಎಸ್. ಮಾಡಿದ ಫೋಟೋಗಳನ್ನು ಹಾಜರ ಮಾಡಿಲ್ಲ. ಉತಾರದಲ್ಲಿ 1ನೇ ಪ್ರತಿವಾದಿಯ ಹೆಸರು

ಇದ್ದುದ್ದರ ದುರುಪಯೋಗ ಪಡಿಸಿಕೊಂಡು ಕೆ.ಇ.ಬಿ ಯಿಂದ ಸುಳ್ಳು ಅನುಮತಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ